**<u>ದಿನಾಂಕಃ 17.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿ**ವಾದಿ ಪರ** ಶ್ರೀ.ಎಂ.ಡಿ **ವಕೀಲರಿಂದಃ**</u>

ನಿಪಿ-1 ರ ದಾಖಲಾತಿಯು ಪುಟ್ಟಮಾದಮ್ಮ ಕೋಂ ಜವರಯ್ಯರವರಿಗೆ ಸಂಬಂಧಿಸಿದ ಕ್ರಯ ಪತ್ರ ಎಂದರೆ ಸರಿ. ನಿಪಿ-2 ರ ಕ್ರಯ ಪತ್ರದ ಮೂಲಕ ನಾನು ಪುಟ್ಟಮಾದಮ್ಮ ಕೋಂ ಜವರಯ್ಯರವರಿಂದ ನಿಪಿ-1 ರ ಕ್ರಯ ಪತ್ರದಲ್ಲಿ ನಮೂದಾಗಿರುವ ಆಸ್ತಿಯನ್ನು ಖರೀದಿಸಿರುತ್ತೇನೆ. ನಿಪಿ-1 ಮತ್ತು ನಿಪಿ-2 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಗಳು ಸರಿಯಾಗಿರುತ್ತವೆ. ನಿಪಿ-1 ಮತ್ತು ನಿಪಿ-2 ರ ಕ್ರಯ ಪತ್ರದ ಚೆಕ್ಕುಬಂಧಿಯಲ್ಲಿ ಪೂರ್ವಕ್ಕೆ ಬಿಳಿಗಿರಿ ನಾಯಕರ ಜಾಗ ಎಂದು ನಮೂದಿಸಿದೆ ಎಂದರೆ ಸರಿ. ಸದರಿ ಬಿಳಿಗಿರಿ ನಾಯಕರವರು ಪ್ರತಿವಾದಿಗಳ ತಾತ ಎಂದರೆ ನನಗೆ ಗೊತ್ತಿಲ್ಲ. ವೆಂಕಟಯ್ಯರವರು ಬಿಳಿಗಿರಿ ನಾಯಕರವರ ಮಗ. ಬಿಳಿಗಿರಿ ನಾಯಕರವರಿಗೆ ವೆಂಕಟಯ್ಯ, ನಂಜನಾಯಕ ಹಾಗೂ ರಂಗಸ್ವಾಮಿರವರು ಮಕ್ಕಳು ಎಂದರೆ ಸರಿ. ಬಿಳಿಗಿರಿ ನಾಯಕರವರು ಪ್ರತಿವಾದಿಗಳ ತಾತ ಎಂದು ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು ನಿಪಿ-2 ರ ಕ್ರಯ ಪತ್ರದ ಶೆಡ್ಯೂಲ್ ನ ಚೆಕ್ಕುಬಂಧಿಯಲ್ಲಿ ನಮೂದಿಸಿರುವ ಪೂರ್ವಕ್ಕೆ ಬಿಳಿಗಿರಿ ನಾಯಕರವರ ಜಾಗ ವು ಪ್ರತಿವಾದಿಗಳ ತಂದೆಯ ಭಾಗಕ್ಕೆ ಬಂದು ನಂತರ ಪ್ರತಿವಾದಿಗಳಿಗೆ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 15.09.1998 ರ ಪಂಚಾಯಿತಿ ವಿಭಾಗ ಪತ್ರದ ಮೂಲಕ ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಇರುವ ಆಸ್ತಿಯಲ್ಲಿ ಪ್ರತಿವಾದಿಗಳು 3 ಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ಮತ್ತು ನಿಡಿ-3 ರ ಭಾವಚಿತ್ರದಲ್ಲಿ ಕಾಣುವ ತಳಹದಿ ನಾನು ಹಾಕಿರುವ ತಳಹದಿ ಎಂದರೆ ಸರಿ. ಸದರಿ ತಳಹದಿಯ ಬಲಭಾಗಕ್ಕೆ ಇರುವ ಖಾಲಿ ಜಾಗವು 3 ನೇ ಪ್ರತಿವಾದಿಗೆ ಸೇರಿದ್ದರೂ ಸಹ ಸದರಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳ ಉತ್ತರಕ್ಕೆ ಪುಟ್ಟ ನಂಜಮ್ಮ ಮತ್ತು ಪ್ರತಿವಾದಿಗಳ ಮನೆ ಬರುತ್ತದೆ ಎಂದರೆ ಸಾಕ್ಷಿದಾರರು ಬಸಮ್ಮರವರ ಮನೆಯಲ್ಲಿ ಪ್ರತಿವಾದಿಗಳು ವಾಸಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದ ಪತ್ರದ ಶೆಡ್ಯೂಲ್ ನಲ್ಲಿ ಉತ್ತರಕ್ಕೆ ಪ್ರತಿವಾದಿಗಳ ಮನೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳು ಮತ್ತು ಪ್ರತಿವಾದಿಗಳ ಮನೆಯ ನಡುವೆ 3 ಅಡಿಯ ಗಲ್ಲಿ ಬರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿದಾರರಿಗೆ 2 ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವಚಿತ್ರಗಳನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವಚಿತ್ರಗಳನ್ನು ನಿ ಡಿ 4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ನಿಡಿ 4 ಮತ್ತು 5 ರ ಭಾವಚಿತ್ರಗಳಲ್ಲಿ ಕಾಣುವ ಬಾವಿಯು ನಮ್ಮ ಮನೆ ಮತ್ತು ವೆಂಕಟಯ್ಯರವರ ಮನೆ ನಡುವೆ ಇರುತ್ತದೆ. ನಮ್ಮ ಪತ್ರಗಳಲ್ಲಿ ಉತ್ತರಕ್ಕೆ ವೆಂಕಟಯ್ಯರವರ ಮನೆ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನಮ್ಮ ಮನೆಯ ಪೂರ್ವಕ್ಕೆ ವೆಂಕಟಯ್ಯರವರ ನಿವೇಶನ ಇದೆ ಎಂದು ನುಡಿಯುತ್ತಾರೆ. ನಿ ಡಿ 4 ಮತ್ತು 5 ರ ಭಾವಚಿತ್ರಗಳಲ್ಲಿ ಬಾವಿ ಮತ್ತು ಮನೆಯ ನಡುವೆ ಗಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ 1 ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಸದರಿ ಭಾವಚಿತ್ರವನ್ನು ನಿ ಡಿ 6 ಎಂದು ಗುರುತಿಸಲಾಯಿತು. ಸದರಿ ನಿ ಡಿ 6 ರ ಭಾವಚಿತ್ರದಲ್ಲಿ ಕಾಣುವ ಹುಲ್ಲಿನ ಮೆದೆ ಮತ್ತು ಟ್ರಾಕ್ಟರ್ ಬಿಳಿಗಿರಿ ನಾಯಕರವರ ನಿವೇಶನದಲ್ಲಿ ಇರುತ್ತದೆ. ಸದರಿ ನಿ ಡಿ 6 ರ ಭಾವಚಿತ್ರದಲ್ಲಿ ಕಾಣುವ ಖಾಲಿ ನಿವೇಶನವು ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಬರುತ್ತದೆ. ನಾನು ದುರುದ್ದೇಶದಿಂದ ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ವೆಂಕಟಯ್ಯರವರ ಮಕ್ಕಳ ನಿವೇಶನ ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಅನುಸೂಚಿ ಸ್ವತ್ತಿನ ಪೂರ್ವದ ಚೆಕ್ಕುಬಂಧಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ಸುಳ್ಳು ಚೆಕ್ಕುಬಂಧಿಯನ್ನು ನಮೂದಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿಗೆ ಆಗಿರುವ ಖಾತೆಯನ್ನು ನಾನು ಇದುವರೆಗೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತುಗಳಿಗೆ ಎಂದಿಗೂ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಾಗವನ್ನು ಈ ದಾವೆಯಲ್ಲಿ ಸೇರಿಸಿ ಪ್ರತಿವಾದಿಗಳಿಗೆ ನಾನು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪುಟ್ಟನಂಜಮ್ಮರವರು ಪ್ರತಿವಾದಿಗಳಿಗೆ ಸಹೋದರಿ ಆಗಬೇಕು. ದಾವಾ ಅನುಸೂಚಿ ಸ್ವತ್ತಿನ ಉತ್ತರಕ್ಕೆ ಪುಟ್ಟನಂಜಮ್ಮರವರ ಮನೆಯು ಬರುತ್ತದೆ ಎಂದರೆ ಸರಿ. ಪುಟ್ಟನಂಜಮ್ಮರವರ ಮನೆಯ ಪೂರ್ವಕ್ಕೆ ಇರುವ ಮನೆಯಲ್ಲಿ 3 ನೇ ಪ್ರತಿವಾದಿಯು ವಾಸಿಸುತ್ತಿದ್ದಾರೆ ಎಂದರೆ ಸರಿ. ಸದರಿ ಮನೆಯನ್ನು 3 ನೇ ಪ್ರತಿವಾದಿಯು ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಿದ್ದಾರೆ ಎಂದರೆ ಸಾಕ್ಷಿದಾರರು ಬಸಮ್ಮರವರ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆಯ ವಿಸ್ತೀರ್ಣ ಪೂರ್ವ ಪಶ್ಚಿಮ 21 ½ ಅಡಿ ದಕ್ಷಿಣ ಉತರ 43 ಅಡಿ ಎಂದರೆ ನನಗೆ ಗೊತ್ತಿಲ್ಲ. ಸದರಿ 3 ನೇ ಪ್ರತಿವಾದಿಯ ಮನೆಯ ಪೂರ್ವಕ್ಕೆ 1 ಮತ್ತು 2 ನೇ ಪ್ರತಿವಾದಿಗಳ ಮನೆ ಇದೆ ಎಂದರೆ ಸರಿ. ಸದರಿ ವಿಚಾರಗಳೆಲ್ಲವೂ ನನಗೆ ತಿಳಿದಿದ್ದರೂ ಸಹ ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ಸುಳ್ಳು ಚೆಕ್ಕುಬಂಧಿಯನ್ನು ನಮೂದಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ